ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 17–12–2020

# ಪತ್ರಿಕಾ ಪ್ರಕಟಣೆ

## ಬೆಂಗಳೂರು ಮಿಷನ್ –2022

**ಬೆಂಗಳೂರು, 17ನೇ ಡಿಸೆಂಬರ್ 2020(ಕರ್ನಾಟಕ ವಾರ್ತೆ):**

ಬೆಂಗಳೂರು ನಗರದಲ್ಲಿ ಅತ್ಯುತ್ತಮ ಮೂಲ ಸೌಕರ್ಯ ಒದಗಿಸುವುದರೊಂದಿಗೆ ಜಗತ್ತಿನ ಅತ್ಯುತ್ತಮ ನಗರಗಳಲ್ಲಿ ಒಂದಾಗಿ ರೂಪಿಸುವುದು. ಆಧುನಿಕ ಸ್ಪರ್ಷತೆಯ ಜೊತೆಯಲ್ಲಿ ಸ್ವಚ್ಛ ಸುಂದರ ಪರಿಸರ ನಿರ್ಮಾಣ ಮಾಡುವುದು ಸರ್ಕಾರದ ಮೊದಲ ಆದ್ಯತೆ ಆಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಕುರಿತು ಬೆಂಗಳೂರಿನ ಜನಪ್ರತಿನಿಧಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳೊಂದಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ "ಬೆಂಗಳೂರು ಮಿಷನ್–2022" ಸಂವಾದ ಕಾರ್ಯಕ್ರಮದಲ್ಲಿ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿ ಮಾತಾನಾಡಿದ ಮುಖ್ಯಮಂತ್ರಿಗಳು ಬೆಂಗಳೂರಿಗೆ ನವಚೈತನ್ಯ ತುಂಬುವ ಉದ್ದೇಶದಿಂದ ಸರ್ಕಾರ ನೂತನ ಯೋಜನೆ ರೂಪಿಸಿದೆ ಎಂದು ಹೇಳಿದರು.

ಸರ್ಕಾರ ರೂಪಿಸಿರುವ ಈ ಬೆಂಗಳೂರು ಮಿಷನ್–2022 ಗೆ ಚಾಲನೆ ನೀಡಿ ನಂತರ ಪ್ರತಿ ಆರು ತಿಂಗಳಿಗೊಮ್ಮೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಕಾಮಗಾರಿ ನಡೆಯುವ ಸ್ಥಳ ಪರಿಶೀಲನೆಯನ್ನು ನಡೆಸಲಾಗುವುದು. ಪ್ರಧಾನ ಮಂತ್ರಿಗಳು ಸಹ ಈ ಕುರಿತು ತಾವು

ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ಸಮಯದಲ್ಲಿ ಸೂಚಿಸಿದ್ದರು ಎಂದು ನೆನಪಿಸಿಕೊಂಡರು.

ಪ್ರಸ್ತುತ ಜಗತ್ತಿನ ಅತಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಬೆಂಗಳೂರು ಸಹ ಒಂದಾಗಿದೆ. ಅತಿ ವೇಗದ ಬೆಳವಣಿಗೆಯ ಭರದಲ್ಲಿ ನಗರದ ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿಗಳನ್ನೂ ಸಂರಕ್ಷಣೆ ಮಾಡಿ ಮುಂದಿನ ಪೀಳಿಗೆಗೆ ಪರಿಚಯಿಸುವ ಮಹೋನ್ನತ ಗುರಿಯನ್ನು ಸರ್ಕಾರ ಹೊಂದಿದೆ.

ಬೆಂಗಳೂರು ಮಿಷನ್ 2022– ಬೆಂಗಳೂರಿನ ಸರ್ವಾಂಗೀಣ ಪ್ರಗತಿಯ ದೂರದೃಷ್ಟಿ ಹೊಂದಿರುವ ಕಾರ್ಯಕ್ರಮ. ವಿಶ್ವದರ್ಜೆಯ ನಗರವಾಗಿ ಬೆಂಗಳೂರು ನಗರ ನಿರ್ಮಾಣದ ಕನಸು ನನಸಾಗಿಸುವಲ್ಲಿ ಇದೊಂದು ಮಹತ್ವಪೂರ್ಣ ಹೆಜ್ಜೆಯಾಗಿದೆ ಎಂದು ಹೇಳಿದರು.

ಸಂವಾದದಲ್ಲಿ ಕಂದಾಯ ಸಚಿವ ಆರ್. ಅಶೋಕ ಪ್ರಶ್ನೆಯೊಂದಕ್ಕೆ ಉತ್ತರಿಸಿ ಸರ್ಕಾರ ಬೆಂಗಳೂರು ಅಭಿವೃದ್ಧಿ ಬಗ್ಗೆ ಸ್ಪಷ್ಟ ಯೋಜನೆಯನ್ನು ಹೊಂದಿದ್ದು, ಈಗಾಗಲೇ ಅಗತ್ಯ ಇರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಮುಖ್ಯಮಂತ್ರಿಗಳು ಹಸಿರು ನಿಶಾನೆ ತೋರಿಸಿದ್ದಾರೆ. ಮುಂದಿನ ಬಜೆಟ್‌ನಲ್ಲಿ ಅಗತ್ಯ ಅನುದಾನ ಸಿಗಲಿದೆ. ಇದಕ್ಕಾಗಿ ಈಗಾಗಲೇ ಅಧಿಕಾರಿಗಳು ಸಂಪೂರ್ಣ ಪ್ಲಾನ್ ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಬೆಂಗಳೂರು ಮಿಷನ್–2022 ಕುರಿತು ಮಾಧ್ಯಮ ಪ್ರತಿನಿಧಿಗಳಿಂದ ಕೇಳಲ್ಪಟ್ಟ ಹಲವಾರು ಪ್ರಶ್ನೆಗಳಿಗೆ ರಾಜ್ಯ ಮುಖ್ಯ ಕಾರ್ಯದರ್ಶಿ ಟಿ. ಎಂ. ವಿಜಯ ಭಾಸ್ಕರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿ ಗೌರವ ಗುಪ್ತ ಅವರು ಸರ್ಕಾರದ ಪರವಾಗಿ ಉತ್ತರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ. ಪಿ.ಎಸ್. ಹರ್ಷ ಅವರು ನೂರಾರು ವರ್ಷಗಳ ಇತಿಹಾಸವಿರುವ ಬೆಂಗಳೂರು ನಗರವನ್ನು ಭವಿಷ್ಯದ ದೃಷ್ಟಿಕೋನದಿಂದ ಅಭಿವೃದ್ಧಿಪಡಿಸುವ ಉದ್ದೇಶದಿಂದ ಸರ್ಕಾರ ಈ ನೂತನ ಯೋಜನೆಯನ್ನು ಹಮ್ಮಿಕೊಂಡಿದ್ದು, ಯೋಜನೆಯ ಸಫಲತೆಗಾಗಿ ಬೆಂಗಳೂರು ನಗರದ ಸಂಸದರು, ಶಾಸಕರು ಹಾಗೂ ಮಾಧ್ಯಮ ಪ್ರತಿನಿಧಿಗಳೊಂದಿಗೆ ಈ ವಿಶೇಷ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ಸಲಹೆ ಸೂಚನೆಗಳನ್ನು ಪಡೆಯುವುದು ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

**ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ ನಾರಾಯಣ್, ಸಚಿವರುಗಳಾದ ಎಸ್. ಸುರೇಶ್ ಕುಮಾರ್, ಗೋಪಾಲಯ್ಯ, ಡಾ. ಕೆ. ಸುಧಾಕರ್, ಬೈರತಿ ಬಸವರಾಜು ಸೇರಿದಂತೆ ಬೆಂಗಳೂರಿನ ಸಂಸದರು, ಶಾಸಕರು ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.**

## "ಬೆಂಗಳೂರು ಮಿಷನ್ –2022" ಯೋಜನೆಯ ವಿವರಗಳು:

## ಸುಗಮ ಸಂಚಾರ:

ಬೆಂಗಳೂರು ನಗರದ ವ್ಯಾಪ್ತಿ ದಿನೇ ದಿನೇ ಹೆಚ್ಚುತ್ತಿದ್ದು, ವಾಹನ ದಟ್ಟಣೆಯೂ ಹೆಚ್ಚುತ್ತಿದೆ. ಕಳೆದ ಎರಡು ದಶಕಗಳಲ್ಲಿ ವಾಹನಗಳ ದಟ್ಟಣೆ ನಾಲ್ಕು ಪಟ್ಟು ಹೆಚ್ಚಾಗಿದೆ. ಜೊತೆಗೆ ವಾಯು ಮಾಲಿನ್ಯಕ್ಕೆ ಕಾರಣವಾಗಿದೆ.

ಆದಕಾರಣ ಸಾರ್ವಜನಿಕ ಸಾರಿಗೆ ಬಳಕೆಗೆ ಉತ್ತೇಜನ, ನಮ್ಮ ಮೆಟ್ರೋ ಮತ್ತು ಉಪ ನಗರ ರೈಲು ಯೋಜನೆಗೆ ಚುರುಕು, ಅತ್ಯುತ್ತಮ ರಸ್ತೆಗಳ ಅಭಿವೃದ್ಧಿ ಹಾಗೂ ಸಂಚಾರ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ಬಳಕೆಯ ಮೂಲಕ ಮುಂದಿನ ದಿನಗಳಲ್ಲಿ ಸುಗಮ ಸಂಚಾರ ವ್ಯವಸ್ಥೆ ರೂಪಿಸಲು ಉದ್ದೇಶಿಸಲಾಗಿದೆ.

ಈ ನಿಟ್ಟಿನಲ್ಲಿ ಜಾರಿಗೊಳಿಸಲಾಗುತ್ತಿರುವ ಪ್ರಮುಖ ಯೋಜನೆಗಳ ವಿವರ ಇಲ್ಲಿದೆ.

### ಅತ್ಯುತ್ತಮ ರಸ್ತೆ ನಿರ್ವಹಣೆ:

12 ಅತಿ ದಟ್ಟಣೆಯ ರಸ್ತೆಗಳು: ಒಟ್ಟು 190 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ, ಅತ್ಯುತ್ತಮ ನಿರ್ವಹಣೆ ಮಾಡುವ ಯೋಜನೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಮೂಲಕ ತ್ವರಿತವಾಗಿ ಅನುಷ್ಠಾನಗೊಳಿಸುವುದು. ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ನಿರ್ಮಾಣ ಕಾರ್ಯ ಶೀಘ್ರ ಪೂರ್ಣಗೊಳಿಸುವುದು. ಬೆಂಗಳೂರು ನಗರದಲ್ಲಿ ವಾರ್ಷಿಕ ನಿರ್ವಹಣಾ ಒಪ್ಪಂದದ ಮೂಲಕ ಸುಮಾರು 400 ಕಿ.ಮೀ. ಉದ್ದದ ಪ್ರಮುಖ ಸಂಪರ್ಕ ರಸ್ತೆಗಳ ಅತ್ಯತ್ತಮ ನಿರ್ವಹಣೆ. ರಸ್ತೆ ಸುರಕ್ಷತಾ ಪರಿಕರಗಳನ್ನು ಅಳವಡಿಸುವ ಮೂಲಕ ಪ್ರಯಾಣಿಕರ ಸುರಕ್ಷತೆಯನ್ನು ಖಾತರಿ ಪಡಿಸುವುದು. ಸಮನ್ವಯ ಹೊಂದಿದ ಸಿಗ್ನಲ್ ದೀಪಗಳ ಅಳವಡಿಕೆ.

### ಸ್ಮಾರ್ಟ್ ಸಂಚಾರ:

ವಿದ್ಯುತ್ ಚಾಲಿತ ಸಮೂಹ ಸಾರಿಗೆ ವ್ಯವಸ್ಥೆಗಳಿಗೆ ಉತ್ತೇಜನ ನೀಡಲಾಗುವುದು. ಪ್ರಗತಿಯಲ್ಲಿರುವ ಮೆಟ್ರೋ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಿ, ಸಂಚಾರಕ್ಕೆ ಮುಕ್ತಗೊಳಿಸುವುದು. ಪ್ರಮುಖ ರಸ್ತೆಗಳಲ್ಲಿ ಬಸ್ ಆದ್ಯತಾ ಪಥ ಗುರುತಿಸುವುದು. ರಸ್ತೆಗಳಲ್ಲಿನ ದಟ್ಟಣೆ ಕಡಿಮೆಗೊಳಿಸಲು ಉಪ-ನಗರ ರೈಲ್ವೆ ಯೋಜನೆಯನ್ನು ಕಾರ್ಯಗತಗೊಳಿಸುವುದು. ಈ ಕ್ರಮಗಳು ಬೆಂಗಳೂರಿನ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆಗೊಳಿಸಲು ನೆರವಾಗಲಿದೆ. ಅಲ್ಲದೆ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಗೆ ಸುಗಮ ಹಾಗೂ ಸುಸ್ಥಿರ ಸಾರಿಗೆ ವ್ಯವಸ್ಥೆ ಒದಗಿಸಲು ಸಾಧ್ಯವಾಗಲಿದೆ.

## ಸ್ವಚ್ಛ ಬೆಂಗಳೂರು:

ವ್ಯವಸ್ಥಿತ ತ್ಯಾಜ್ಯ ನಿರ್ವಹಣೆ ಬೆಂಗಳೂರು ನಗರ ಎದುರಿಸುತ್ತಿರುವ ಪ್ರಮುಖ ಸವಾಲು. ತ್ಯಾಜ್ಯ ವಿಂಗಡಣೆ, ವೈಜ್ಞಾನಿಕ ನಿರ್ವಹಣೆಗೆ ರಾಜ್ಯ ಸರ್ಕಾರ ಒತ್ತು ನೀಡುತ್ತಿದೆ.

ಬೆಂಗಳೂರು ನಗರದ ಜನಸಂಖ್ಯೆ 1.2 ಕೋಟಿಗೂ ಮೀರಿದೆ. ಪ್ರತಿದಿನ ಸುಮಾರು 5800 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಶೇ. 80 ರಷ್ಟು ಮನೆ-ಮನೆ ಸಂಗ್ರಹ ವ್ಯವಸ್ಥೆಯ ಮೂಲಕ ತ್ಯಾಜ್ಯ ಸಂಗ್ರಹ ಮಾಡಲಾಗುತ್ತಿದೆ. ಆದರೆ ತ್ಯಾಜ್ಯ ವಿಂಗಡಣೆಯ ಪ್ರಮಾಣ ಅತಿ ಕಡಿಮೆ ಇದೆ.

ನಾಗರಿಕರ ಸಹಕಾರದೊಂದಿಗೆ ತ್ಯಾಜ್ಯ ವಿಲೇವಾರಿಯನ್ನು ಇನ್ನಷ್ಟು ದಕ್ಷತೆಯಿಂದ ನಿರ್ವಹಿಸಲು ಈ ಕ್ರಮಗಳನ್ನು ಕೈಗೊಳ್ಳಲಾಗುವುದು.

## ಸಮಗ್ರ ನಗರ ತ್ಯಾಜ್ಯ ನಿರ್ವಹಣೆ:

ನಗರ ತ್ಯಾಜ್ಯ ವಿಲೇವಾರಿಯ ದಕ್ಷ ಹಾಗೂ ಸಮರ್ಥ ನಿರ್ವಹಣೆಗೆ ಸಾಂಸ್ಥಿಕ ರೂಪ ನೀಡುವುದು. ಪ್ರಸ್ತುತ ಕಾರ್ಯನಿರ್ವಹಿಸುವ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಉನ್ನತೀಕರಿಸಿ, ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವುದು. ತಂತ್ರಜ್ಞಾನದ ನೆರವಿನಿಂದ ಘನ ತ್ಯಾಜ್ಯ ಸಂಗ್ರಹ ಮತ್ತು ಸಾಗಾಣಿಕೆಯನ್ನು ನಿರ್ವಹಿಸುವುದು ಹಾಗೂ ನಿಗಾ ವಹಿಸುವುದು. ಹಳೆಯ ತ್ಯಾಜ್ಯ ಸುರಿಯುವ ಸ್ಥಳಗಳ ಅಭಿವೃದ್ಧಿ. ಮಳೆದರಿ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು.

ನನ್ನ ಕಸ ನನ್ನ ಜವಾಬ್ದಾರಿ

ಎಲ್ಲ ಹಂತಗಳಲ್ಲಿ ಘನ ತ್ಯಾಜ್ಯದ ಯಶಸ್ವಿ ನಿರ್ವಹಣೆಗಾಗಿ ನಾಗರಿಕರ ಸಹಭಾಗಿತ್ವವನ್ನು ಹೆಚ್ಚಿಸಲು ತ್ಯಾಜ್ಯ ನಿರ್ವಹಣಾ ತರಬೇತುದಾರರ ತರಬೇತಿ ಹಾಗೂ ಶುಚಿ ಮಿತ್ರರ ತರಬೇತಿ ಕಾರ್ಯಕ್ರಮ. ಪ್ರತಿ ವಲಯದಲ್ಲಿ ಗೊಬ್ಬರ ತಯಾರಿಕೆ ಹಾಗೂ ಶೂನ್ಯ ತ್ಯಾಜ್ಯ ಮನೆಗಳ ಕುರಿತಂತೆ ಸಮುದಾಯಕ್ಕೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲು ಕಲಿಕಾ ಕೇಂದ್ರಗಳ ಸ್ಥಾಪನೆ. ಸ್ಥಳೀಯವಾಗಿಯೇ ಗೊಬ್ಬರ ಖರೀದಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಮನೆಯಲ್ಲಿಯೇ ಹಸಿ ತ್ಯಾಜ್ಯ ಸಂಸ್ಕರಣೆಯನ್ನು ಪ್ರೋತ್ಸಾಹಿಸುವುದು. ಈ ಉಪಕ್ರಮಗಳ ಮೂಲಕ ದಕ್ಷ ತ್ಯಾಜ್ಯ ನಿರ್ವಹಣೆಗೆ ಇತರ ನಗರಗಳಿಗೆ ಬೆಂಗಳೂರು ಮಾದರಿಯಾಗಬೇಕು ಎಂಬ ಆಶಯವನ್ನು ಸರ್ಕಾರ ಹೊಂದಿದೆ.

## ಹಸಿರು ಬೆಂಗಳೂರು:

ಬೆಂಗಳೂರು ನಗರ ಉದ್ಯಾನಗಳ ನಗರ ಎಂಬ ಹೆಗ್ಗಳಿಕೆಯನ್ನು ಮುಡಿಗೇರಿಸಿಕೊಂಡಿದೆ. ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಂತಹ ಸುಂದರ ಉದ್ಯಾನಗಳು, ನೂರಾರು ಕೆರೆಗಳು, ಬೆಂಗಳೂರು ನಗರದ ಸೌಂದರ್ಯವನ್ನು ಹೆಚ್ಚಿಸಿದ್ದವು.

ಆದರೆ ಕಳೆದ 2 ದಶಕಗಳಲ್ಲಿ ನಗರದ ಅತಿ ವೇಗದ ಬೆಳವಣಿಗೆಯಿಂದಾಗಿ ನಗರದ ಹಸಿರು ಹೊದಿಕೆ ಹಾಗೂ ಜಲ ಮೂಲಕಗಳಿಗೆ ಕುಂದುಂಟಾಗಿದೆ. ಉದ್ಯಾನಗಳು ಮತ್ತು ಕೆರೆಗಳ ಪುನರುಜ್ಜೀವನದ ಮೂಲಕ ಉದ್ಯಾನ ನಗರಿಯ ಹೆಮ್ಮೆಯನ್ನು ಬೆಂಗಳೂರಿಗೆ ಮರಳಿಸುವುದು ಸರ್ಕಾರದ ಉದ್ದೇಶವಾಗಿದೆ. ನಾಗರಿಕರಿಗೆ ಅಗತ್ಯವೂ, ಅನಿವಾರ್ಯವೂ ಆಗಿದೆ. ಹಸಿರು ಬೆಂಗಳೂರು ನಿರ್ಮಾಣಕ್ಕೆ ಸರ್ಕಾರದ ಮುನ್ನೋಟ:

## ಹಸಿರು ನೆರೆಹೊರೆ:

ರಾಜ್ಯ ಸರ್ಕಾರದ ಕೆಲ ಸಾರ್ವಜನಿಕ ಉದ್ದಿಮೆಗಳ ಭೂಮಿಯನ್ನು ನಗರದ ಹಸಿರು ಹೊದಿಕೆ ಹೆಚ್ಚಿಸಲು ಮರುಬಳಕೆ ಮಾಡುವುದು. ನಗರದ ಹೊರವಲಯದಲ್ಲಿ 400 ಎಕರೆಗೂ ಹೆಚ್ಚು ಪ್ರದೇಶಗಳಲ್ಲಿ ಎರಡು ಬೃಹತ್ ವೃಕ್ಷೋದ್ಯಾನಗಳ ಅಭಿವೃದ್ಧಿ. ನಗರದ ತುರಹಳ್ಳಿ, ಜೆಪಿ ನಗರ, ಕಾಡುಗೋಡಿ ಮತ್ತು ಮತ್ತಿಕೆರೆಯ ಕಿರು ಅರಣ್ಯಗಳನ್ನು ಜನಪ್ರಿಯಗೊಳಿಸುವುದು. ನಗರದ ವಾತಾವರಣದ ವಾಯು ಮಾಲಿನ್ಯದ ಮೇಲೆ ತೀವ್ರ ನಿಗಾ ವಹಿಸಲು ವಾಯು ಗುಣಮಟ್ಟ ಪರೀಕ್ಷಾ ಉಪಕರಣಗಳ ಸಂಖ್ಯೆಯನ್ನು 500 ಕ್ಕೆ ಹೆಚ್ಚಿಸುವುದು.

## ಜಲಮೂಲಗಳ ಶುದ್ಧೀಕರಣ ಹಾಗೂ ಸಂರಕ್ಷಣೆ:

ಕೆ–100 ರಾಜಕಾಲುವೆ ಯೋಜನೆ ಮೂಲಕ ರಾಜಕಾಲುವೆಗಳು ಹರಿಯುವ ಪ್ರದೇಶಗಳ ಅಭಿವೃದ್ಧಿ. ಬೆಂಗಳೂರಿನ 25 ಕೆರೆಗಳ ಪುನಶ್ಚೇತನಕ್ಕೆ ಕ್ರಮ. ಆ ಮೂಲಕ ನೀರಿನ ಗುಣಮಟ್ಟ ಸುಧಾರಿಸುವ ಜೊತೆಗೆ 20 ಕೆರೆಗಳಲ್ಲಿ ಪ್ರತಿ ಕ್ಷಣ ನೀರಿನ ಗುಣಮಟ್ಟದ ಮೇಲೆ ನಿಗಾ. ಈ ಕೆರೆಗಲ ಸುತ್ತ ಜೀವವೈವಿಧ್ಯ ರಕ್ಷಣೆಗೆ ಆದ್ಯತೆ. ಸ್ವಯಂಸೇವಕರು ಮತ್ತು ಇತರ ಭಾಗೀದಾರರೊಂದಿಗೆ ಯೋಜನೆಯ ಅನುಷ್ಠಾನಕ್ಕೆ ಕ್ರಮ. ಈ ಉಪಕ್ರಮಗಳಿಂದಾಗಿ ನಗರದ ಹಸಿರು ವಿಸ್ತರಿಸುವದಲ್ಲದೆ ಮತ್ತೆ ಉದ್ಯಾನ ನಗರಿ ಎಂಬ ಮನ್ನಣೆಗೆ ಅನ್ವರ್ಥವಾಗುವುದು.

## ಜನ ಸಂಪರ್ಕ:

ಸಾರ್ವಜನಿಕ ಕುಂದುಕೊರತೆ ನಿವಾರಣೆ ಹಾಗೂ ನಾಗರಿಕ ಸೇವೆಗಳು

ದಿನೇ ದಿನೇ ಬೆಳೆಯುತ್ತಿರುವ ನಗರದಲ್ಲಿ ನಾಗರಿಕರೊಂದಿಗೆ ನಿರಂತರ ಸಂವಹನ ನಡೆಸಲು, ನಾಗರಿಕ ಸೇವೆಗಳನ್ನು ಒದಗಿಸಲು ಹಾಗೂ ಸಾರ್ವಜನಿಕ ಕುಂದುಕೊರತೆ ನಿವಾರಿಸಲು ಸರ್ಕಾರವು ಪರಿಣಾಮಕಾರಿ ಡಿಜಿಟಲ್ ವೇದಿಕೆ ನಿರ್ಮಿಸುವ ಗುರಿಯನ್ನು ಹೊಂದಿದೆ.

ಜೊತೆಗೆ ಬೆಂಗಳೂರಿನ ಸಂಸ್ಕೃತಿ, ಪರಂಪರೆಗಳನ್ನು ಅನಾವರಣಗೊಳಿಸುವ ಕೇಂದ್ರವನ್ನು ಸಹ ಸ್ಥಾಪಿಸಲಾಗುವುದು.

## ಏಕೀಕೃತಯ ಜನಂಪರ್ಕ ವೇದಿಕೆ:

ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಮತ್ತು ಮರಣ ಪ್ರಮಾಣ ಪತ್ರಗಳ ವಿತರಣೆ, ವ್ಯಾಪಾರ ಪರವಾನಗಿ ವಿತರಣೆ ಮೊದಲದ ನಾಗರಿಕ ಸೇವೆಗಳು ಏಕೀಕೃತ ಡಿಜಿಟಲ್ ವೇದಿಕೆಯಲ್ಲಿ ಒದಗಿಸುವುದು. ನಾಗರಿಕರಿಗೆ ರಸ್ತೆ ಕುರಿತ ಮಾಹಿತಿ ಆನ್‌ಲೈನ್‌ನಲ್ಲಿ ಒದಗಿಸುವುದು. ನಾಗರಿಕ ಸೇವೆಗಳು, ವಿವಿಧ ಯೋಜನೆಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳ ಕುರಿತು ಮಾಹಿತಿ ಒದಗಿಸುವುದು. ಸಾರ್ವಜನಿಕ ಕುಂದುಕೊದರತೆ ನಿವಾರಣೆಗೆ

ಏಕೀಕೃತ ವೇದಿಕೆಯಾಗಿ ಸಹಾಯ ಪೋರ್ಟಲ್ ನ ಮರುವಿನ್ಯಾಸ. ಆ ಮೂಲಕ ಬೆಂಗಳೂರಿನ ನಾಗರಿಕರಿಗೆ ಸುಧಾರಿತ ಸೇವೆ ಒದಗಿಸುವುದು.

**ಬೆಂಗಳೂರಿಗೊಂದು ಬೆಳಕಿಂಡಿ:**

ಸಂಸ್ಕೃತಿ, ಪರಂಪರೆ ಮತ್ತು ಕರಕುಶಲ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗುವುದು. ಸಾರ್ವಜನಿಕರಿಗೆ ಮನರಂಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನದ ತಾಣಗಳನ್ನು ಅಭಿವೃದ್ಧಿಪಡಿಸುವುದು. ಆ ಮೂಲಕ ಕಲಾಕಾರರು, ಕುಶಲಕರ್ಮಿಗಳು ಹಾಗೂ ಇತರ ಸೃಜನಶೀಲ ವೃತ್ತಿಯಲ್ಲಿರುವವರಿಗೆ ಅವಕಾಶಗಳನ್ನು ಒದಗಿಸುವುದು. ಇತಿಹಾಸ–ಬೆಂಗಳೂರಿನ ತಂತ್ರಜ್ಞಾನಗದ ಇತಿಹಾಸವನ್ನು ಪರಿಚಯಿಸುವ ಸಂವಹನಶೀಲ ಡಿಜಿಟಲ್ ಪ್ರಾತ್ಯಕ್ಷಿಕೆಯನ್ನು ಸ್ಥಾಪಿಸುವುದು. ಉದ್ಯಮಶೀಲತೆ, ನಾವಿನ್ಯತೆ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮಗಳ ಮುನ್ನಡೆಯನ್ನು ಬಿಂಬಿಸುವ ಬೆಂಗಳೂರು ಇನ್ನೊವೇಷನ್ ಕೇಂದ್ರದ ಸ್ಥಾಪನೆ. ಜನಸ್ನೇಹಿ ಕ್ರಮಗಳ ಮೂಲಕ ಅತ್ಯುತ್ತಮ ನಾಗರಿಕ ಸೇವೆ ಒದಗಿಸುವುದರೊಂದಿಗೆ ಸಾರ್ವಜನಿಕ ಕುಂದು ಕೊರತೆಗಳ ತ್ವರಿತ ನಿವಾರಣೆ ಸರ್ಕಾರದ ಆದ್ಯತೆಯಾಗಿದೆ.

## ಸಾರಿಗೆ ಅದಾಲತ್

**ಬೆಂಗಳೂರು, ಡಿಸೆಂಬರ್ 17 (ಕರ್ನಾಟಕ ವಾರ್ತೆ) :**

**ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಸಾರಿಗೆ ಇಲಾಖೆ ರಾಜಾಜಿನಗರ, ಬೆಂಗಳೂರು ಪಶ್ಚಿಮ, ಇಲ್ಲಿ ದಿನಾಂಕ 21–12–2020 ರಂದು ಮಧ್ಯಾಹ್ನ 4–00 ಗಂಟೆಗೆ ಇಲಾಖೆಯ ಹಿರಿಯ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ "ಸಾರಿಗೆ ಅದಾಲತ್" ಕಾರ್ಯಕ್ರಮವನ್ನು ನಡೆಸಲಾಗುವುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಉದ್ಯಮಿ ಆರ್.ಎನ್.ಶೆಟ್ಟಿ ನಿಧನಕ್ಕೆ ವಿಧಾನ ಸಭೆಯ ಸಭಾಧ್ಯಕ್ಷರ ಸಂತಾಪ

**ಬೆಂಗಳೂರು, ಡಿಸೆಂಬರ್ 17 (ಕರ್ನಾಟಕ ವಾರ್ತೆ) :**

ನಾಡಿನ ಖ್ಯಾತ ಉದ್ಯಮಿ ಶ್ರೀ ಆರ್.ಎನ್. ಶೆಟ್ಟಿ ಅವರ ನಿಧನಕ್ಕೆ ವಿಶ್ವೇಶ್ವರ ಹೆಗಡೆ, ಕಾಗೇರಿ, ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಕೃಷಿಕ ಮನೆತನದಲ್ಲಿ ಜನಿಸಿ, ಉದ್ಯಮದತ್ತ ಮುಖ ಮಾಡಿದ ಅವರು, ನಿರ್ಮಾಣ, ಮೂಲಭೂತಸೌಕರ್ಯ ಅಭಿವೃದ್ಧಿ ಹಾಗೂ ಹೋಟೆಲ್ ಉದ್ಯಮ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದವರು. ಸಹಸ್ರಾರು ಮಂದಿಗೆ ಅನ್ನದಾತರೂ ಆಗಿದ್ದಾರೆ. ಅಲ್ಲದೆ ತಮ್ಮ ಕಾರ್ಯಕ್ಷೇತ್ರವನ್ನು ಶಿಕ್ಷಣ ಕ್ಷೇತ್ರಕ್ಕೂ ವೃದ್ಧಿಸಿ ಯುವ ಪೀಳಿಗೆಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡಿರುತ್ತಾರೆ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ ಹಾಗೂ ಅವರ ಕುಟುಂಬದವರಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ ಎಂದು ಶೋಕ ವ್ಯಕ್ತಪಡಿಸಿದ್ದಾರೆ.

## ಉಡುಪಿ ಜಿಲ್ಲೆಯ ಸವಣೂರು ಯುವಕ ಮಂಡಳಕ್ಕೆ ಅತ್ಯುತ್ತಮ ಪ್ರಶಸ್ತಿ

**ಬೆಂಗಳೂರು, ಡಿಸೆಂಬರ್ 17 (ಕರ್ನಾಟಕ ವಾರ್ತೆ) :**

ಉಡುಪಿ ಜಿಲ್ಲೆಯ ಸವಣೂರು ಯುವಕ ಮಂಡಳ 2019–20 ನೇ ಸಾಲಿನ ಅತ್ಯುತ್ತಮ ಪ್ರಶಸ್ತಿಗೆ ಬಾಜನವಾಗಿದೆ. ನೆಹರು ಯುವ ಕೇಂದ್ರ ಸಂಘಟನೆಯಿಂದ ಕೊಡ ಮಾಡುವ ರಾಜ್ಯಮಟ್ಟದ ಈ ಪ್ರಶಸ್ತಿಯು 75,000 ರೂ. ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಮುಖ್ಯಮಂತ್ರಿಗಳೊಂದಿಗೆ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕುರಿತು ಸಭೆ

**ಬೆಂಗಳೂರು, ಡಿಸೆಂಬರ್ 17 (ಕರ್ನಾಟಕ ವಾರ್ತೆ) :**

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರು ಮಾನ್ಯ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ ಅವರನ್ನು ಇಂದು ಅಧಿಕೃತ ನಿವಾಸ ಕಾವೇರಿಯಲ್ಲಿ ಭೇಟಿ ಮಾಡಿ ಅಭಿನಂದಿಸಿದರು. ಭದ್ರಾ ಕಾಡ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದಿನದಿಂದ ಪ್ರಾಧಿಕಾರದ ವ್ಯಾಪ್ತಿಯ ವಿವಿಧ ಭಾಗಗಳಲ್ಲಿ ಪ್ರವಾಸ ಕೈಗೊಂಡು ಅಚ್ಚುಕಟ್ಟು ಪ್ರದೇಶದ ಅನ್ನದಾತರಿಗೆ ನೇರವಾಗಿ ಭೇಟಿ ಮಾಡಿ ಎದುರಾಗಿರುವ ಅನಾನುಕೂಲಗಳ ಬಗ್ಗೆ ಅಧ್ಯಯನ ನಡೆಸಿದರ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಯಿತು.
ಮುಂದುವರೆದು..
ಪ್ರವಾಸ ಕೈಗೊಂಡ ಸಂದರ್ಭದಲ್ಲಿ ರೈತರು ನೀಡಿರುವ ಅರ್ಜಿಗಳ ಬಗ್ಗೆ ವಿಶೇಷವಾಗಿ ಚರ್ಚಿಸಲಾಯಿತು.
ಮುಂಬರುವ ಆಯವ್ಯಯದಲ್ಲಿ ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ನೀಡುವಂತೆ, ಬಜೆಟ್ ನಲ್ಲಿ ಸೇರಿಸುವಂತೆ ಸುಮಾರು **425** ಕೋಟಿ ರೂಗಳ ಕ್ರಿಯಾ ಯೋಜನೆ ನೀಡಲಾಯಿತು ಹಾಗೂ ಜಲಾಶಯದಿಂದ ಕಾಲುವೆಗಳಿಗೆ ಹರಿಸುತ್ತಿದ್ದ ನೀರು

ಈಗಾಗಲೇ ನಿಲ್ಲಿಸಿದ್ದು, ಕಾಲುವೆಗಳ ದುರಸ್ಥಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ತಕ್ಷಣವೇ ಸುಮಾರು 25 ಕೋಟಿ ರೂಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಲಾಯಿತು.

ಮುಂದುವರೆದು ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ನೀಡುವುದರಿಂದ ಅಚ್ಚುಕಟ್ಟು ಭಾಗದ ರೈತರಿಗೆ ಸಾಕಷ್ಟು ವರ್ಷಗಳಿಂದ ಬಾಕಿ ಉಳಿದಿರುವ ಕಾಮಗಾರಿಗಳ ಅನುಷ್ಠಾನಕ್ಕೆ ಪ್ರಥಮ ಆದ್ಯತೆ ಕೊಟ್ಟಂತಾಗುತ್ತದೆ ಜೊತೆಗೆ ರೈತರಿಗೆ ಎಲ್ಲಾ ರೀತಿಯಲ್ಲೂ ಮೂಲಭೂತ ಸೌಕರ್ಯ ಕಲ್ಪಿಸಿ ಕೊಟ್ಟಂತಾಗುತ್ತದೆ ಎಂದು ಗಮನ ಸೆಳೆಯುವ ಪ್ರಯತ್ನ ಮಾಡಲಾಯಿತು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮಾನ್ಯ ಮುಖ್ಯಮಂತ್ರಿಗಳು ಶೀಘ್ರವೇ ಪ್ರಾಧಿಕಾರಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವುದರ ಜೊತೆಗೆ ಸೂಕ್ತ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು.

## Karnataka State Pollution Control Board
## ParisaraBhavan, Bengaluru
## AQI of the CAAQM stations established in Bengaluru City
## Date :17.12.2020

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | * | * | * |
| 2 | Jayanagar 5th Block, Shalini ground | 90 | Satisfactory | $PM_{10}$ |
| 3 | KAVIKA, Mysore Road | 98 | Satisfactory | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 61 | Satisfactory | $PM_{10}$ |
| 5 | HSR Layout, near Central Silkboard | 68 | Satisfactory | $PM_{10}$ |
| 6 | City Railway Station, Magestic, Bengaluru | 95 | Satisfactory | $PM_{10}$ |
| 7 | Saneguruvanahalli, NisargaBhavan, KSPCB, | 63 | Satisfactory | CO |

| | | | | |
|---|---|---|---|---|
| | Shivanagara | | | |
| 8 | BWSSB, Kadabesanahalli | 90 | Satisfactory | $PM_{2.5}$ |
| 9 | Peenya | 66 | Satisfactory | $O_3$ |
| 10 | BTM Layout | 38 | Satisfactory | CO |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

**ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

**ಪರಿಸರ ಭವನ, ಬೆಂಗಳೂರು.**

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 17.12.2020**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | * | * | * |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 90 | ತೃಪ್ತಿಕರ | $PM_{10}$ |
| 3 | ಕವಿಕ, ಮೈಸೂರುರಸ್ತೆ | 98 | ತೃಪ್ತಿಕರ | $PM_{10}$ |

| | | | | |
|---|---|---|---|---|
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 61 | ತೃಪ್ತಿಕರ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 68 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 95 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 63 | ತೃಪ್ತಿಕರ | CO |
| 8 | BWSSB, ಕಾಡಬೀಸನಹಳ್ಳಿ | 90 | ತೃಪ್ತಿಕರ | $PM_{2.5}$ |
| 9 | ಪೀಣ್ಯ | 66 | ತೃಪ್ತಿಕರ | $O_3$ |
| 10 | ಬಿಟಿಎಂ ಲೇಔಟ್ | 38 | ತೃಪ್ತಿಕರ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |